॥ ಓಂ ನಮಃ ಶಿವಾಯ ॥

# ಅಖಿಲ ಭಾರತ ವೀರಶೈವ ಶಿವಾಚಾರ್ಯರ ಸಂಸ್ಥೆ (ರಿ)

ಪ್ರಧಾನ ಕಛೇರಿ: ಶ್ರೀ ಮಹಾಂತಿನ ಮಠ, ಚಿಕ್ಕಪೇಟೆ, ಬೆಂಗಳೂರು-560053.
ಸಂಪರ್ಕಕ್ಕಾಗಿ: ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠ, ಬೆಂಗಳೂರು-560037.

**ಗೆ** **ದಿನಾಂಕ: 29-06-2024**

**ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು**
**ಮಾನ್ಯ ಮುಖ್ಯಮಂತ್ರಿಗಳು,**
**ಕರ್ನಾಟಕ ಸರಕಾರ.**

ಮಾನ್ಯ ಮುಖ್ಯ ಮಂತ್ರಿಗಳಿಗೆ ಅನಂತ ಮಂಗಲಗಳು,

**ವಿಷಯ: 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಬಸವೇಶ್ವರರ ವಿಷಯವನ್ನು ಪರಿಷ್ಕರಣೆ ಮಾಡಿದ ಬಗ್ಗೆ.**

ಮಾನ್ಯರೆ,

ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯು 1981ರಲ್ಲಿ ಸಂಸ್ಥಾಪಿಲ್ಪಟ್ಟ ಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ತಮಿಳನಾಡು, ಕೇರಳ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿರುವ ಸುಮಾರು 5000ಕ್ಕೂ ಹೆಚ್ಚು ವೀರಶೈವಧರ್ಮದ ಗುರುಪರಂಪರೆಯ ಪಂಚಪೀಠಗಳ ಶಾಖಾಮಠಗಳ ಮಠಾಧೀಶರು ಸದಸ್ಯರಾಗಿದ್ದಾರೆ. ಈ ಎಲ್ಲಾ ಮಠಾಧೀಶರ ಒಮ್ಮತದ ಅಭಿಪ್ರಾಯವನ್ನು ಈ ಪತ್ರದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಜಗಜ್ಯೋತಿ, ಜಗದಾರಾಧ್ಯ, ಭಕ್ತಿಭಂಡಾರಿ, ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಜಗತ್ತಿನಲ್ಲಿ ಮೊದಲು ಸಾಕಾರಗೊಳಿಸದ ಮಹಾಮಹಿಮ, ಮಹಾತ್ಮ, ಮಾನವೀಯ ಮೌಲ್ಯಾಧಾರಿತ ಸರಳ ವೀರಶೈವ ಸಿದ್ಧಾಂತವನ್ನು ಪ್ರಚಾರಪಡಿಸಿದವರು (2016ರ ಶ್ರೀ ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯ ಸಮಿತಿ ಮತ್ತು 2022ರ ಶ್ರೀ ರೋಹಿತ್ ಚಕ್ರತೀರ್ಥರವರ ಅಧ್ಯಕ್ಷತೆಯ ಸಮಿತಿ ಪರೀಷ್ಕೃತ ಪಠ್ಯದಲ್ಲಿ ಉಲ್ಲೇಖ), ಸಮಾಜ ಸುಧಾರಕ, ಧರ್ಮಸುಧಾರಕ, ಕ್ರಾಂತಿಕಾರಿ, ಅನುಭವ ಮಂಟಪ ಸಂಸ್ಥಾಪಕ ಮತ್ತು 'ಕರ್ನಾಟಕ ಸಾಂಸ್ಕೃತಿಕ ನಾಯಕ ಹೀಗೆ ಅನೇಕ ಉಪಾಧಿಗಳಿಂದ ಗುರುತಿಸಲ್ಪಡುತ್ತಿರುವ ಮತ್ತು ಗೌರವಿಸಲಲ್ಪಡುವ ಬಸವಣ್ಣನವರು ಪ್ರಶ್ನಾತೀತ ಮಹಾದಾರ್ಶನಿಕ ಮತ್ತು ಅನುಪಮ ವ್ಯಕ್ತಿತ್ವದ ಮಹಾನ್ನಾಯಕರು. ಕ್ರಿ ಶ. 12ನೇ ಶತಮಾನದಲ್ಲಿ ಅವರು ಮತ್ತು ಅವರ ಸಮಕಾಲೀನ ಎಲ್ಲಾ ಶಿವಶರಣರು ಉಪದೇಶಿಸಿದ ತತ್ವಗಳನ್ನು ಅನುಸರಿಸುವುದೇ ನಾವೆಲ್ಲಾ ಅವರಿಗೆ ಸಲ್ಲಿಸುವ ಗೌರವ.

ಆದರೆ 2024ರ ಶೈಕಣಿಕ ವರ್ಷದ 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಬಸವಣ್ಣನವರ ಪರಿಚಯವನ್ನು 2016ರಿಂದ ಈಗ ಮೂರನೇ ಬಾರಿ ಪರಿಷ್ಕರಿಸಿರುವುದು ಕಂಡು ಬಂದಿದೆ. ಈ ಪರಿಷ್ಕರಣೆಯಲ್ಲಿ ವಿದ್ಯಾರ್ಥಿಗಳಿಗೆ ಅನೇಕ ತಪ್ಪು ಮಾಹಿತಿಗಳನ್ನು ನೀಡಿರಿವುದು ಗಮನಕ್ಕೆ ಬಂದಿದೆ.

ಆದ್ದರಿಂದ ಈ ಪಠ್ಯದಲ್ಲಿರುವ ಬಸವಣ್ಣನವರ ತಪ್ಪು ಮಾಹಿತಿಗಳು ಯಾವವು ಮತ್ತು ಸರಿಯಾದ ಸಂಗತಿ ಏನೆಂಬುದನ್ನು ತಮ್ಮ ಗಮನಕ್ಕೆ ತರಲು ನಾವು ಬಯಸುತ್ತೇವೆ.

1. **ಈ ವರ್ಷ ಪರಿಷ್ಕೃತಗೊಂಡಿರುವ ಪುಸ್ತಕದಲ್ಲಿ 'ವೀರಶೈವ' ಪದವನ್ನು ತಗೆದು ಹಾಕಲಾಗಿದೆ.** ಇದು ಸರಿಯಾದ ಪರಿಷ್ಕರಣೆಯಲ್ಲ. ಏಕೆಂದರೆ ಕರ್ನಾಟಕ ಸರಕಾರ ಪ್ರಸಿದ್ಧ ಸಂಶೋಧಕರಾಗಿದ್ದ ಡಾ. ಎಂ. ಎಂ. ಕಲಬುರಗಿಯವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಸಮಗ್ರ ವಚನ ಸಂಪುಟಗಳಲ್ಲಿ ಪ್ರಕಟವಾದ ವಚನಗಳನ್ನು ಒಮ್ಮೆ ಕುಲಂಕುಶವಾಗಿ ಪರಿಶೀಲಿಸಿ ನೋಡಿದಾಗ ತಿಳಿದು ಬರುವ ಸಂಗತಿ ಏನೆಂದರೆ-**ಬಸಣ್ಣನವರಾದಿಯಾಗಿ 30ಜನ ಶಿವಶರಣರು ತಮ್ಮ 142 ವಚನಗಳಲ್ಲಿ 221 ಬಾರಿ 'ವೀರಶೈವ' ಪದವನ್ನು ಬಳಸಿದ್ದಾರೆ. ಕೇವಲ 8 ಜನ ಶಿವಶರಣರು ತಮ್ಮ 10 ವಚನಗಳಲ್ಲಿ ಕೇವಲ 12 ಕಡೆ ಮಾತ್ರ 'ಲಿಂಗಾಯತ' ಪದವನ್ನು ಬಳಿಸಿದ್ದಾರೆ. ಆದರೆ ಬಸವಣ್ಣನವರು ತಮ್ಮ ಒಂದು ವಚನದಲ್ಲಿಯೂ 'ಲಿಂಗಾಯತ' ಪದ ಬಳಸಿರುವುದಿಲ್ಲ.**



CS CamScanner

**ಆದರೆ ಬಸವಣ್ಣನವರೇ ಅನೇಕ ಬಾರಿ ತಮ್ಮ ವಚನಗಳಲ್ಲಿ 'ವೀರಶೈವ' ಪದ ಬಳಸಿರುವುದಲ್ಲದೇ ತಮ್ಮದೊಂದು ವಚನದಲ್ಲಿ ತಾವು ನಿಜವೀರಶೈವ' (ವಚನ ಸಂಖ್ಯೆ 1092) ಎಂದು ಹೇಳಿಕೊಂಡಿದ್ದಾರೆ.**

ವೈರಾಗ್ಯನಿಧಿ ಅಕ್ಕ ಮಹಾದೇವಿಯವರು ತಮ್ಮದೊಂದು ದೊಡ್ಡ ವಚನದಲ್ಲಿ ಬಸವಣ್ಣನವರು ವೀರಶೈವ ಧರ್ಮವನ್ನುದ್ಧರಿಸುವುದಕ್ಕೋಸ್ಕರವೇ ಅವತರಿಸಿ ಬಂದಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಕರ್ನಾಟಕ ಸರಕಾರ ಡಾ. ಎಂ. ಎಂ. ಕಲಬುರಗಿಯವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಶಿವಶರಣೆಯರ ವಚನ ಸಂಪುಟದಲ್ಲಿ ಪ್ರಕಟವಾಗಿದೆ. ಆ ವಚನ ಹೀಗಿದೆ–

**ಶಿವ ಶಿವಾ, ಆದಿ ಅನಾದಿಗಳೆಂಬೆರಡಿಲ್ಲದ ನಿರವಯ ಶಿವ,**
**ನಿಮ್ಮ ನಿಜವನಾರಯ್ಯ ಬಲ್ಲವರು !**
**ವೇದಂಗಳಿಗಳಿಗಭೇದ್ಯನು; ............**
**...ಈ ಪರಿಯಲ್ಲಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವಣ್ಣನು**
**ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ**
**ವೀರಶೈವ ಮಾರ್ಗವನರುಹುವುದಕ್ಕೆ**
**ಬಾವನ್ನ ವಿವರವನೊಳಗೊಂಡು.......**
**.....ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ**
**ಮೆರೆದ ನಮ್ಮ ಬಸವಣ್ಣನು.**
**ಆ ಬಸವಣ್ಣನ ಶ್ರೀಪಾದಕ್ಕೆ ನಾನು ಅಹೋರಾತ್ರಿಯಲ್ಲಿ**
**ನಮೋ ನಮೋ ಎಂದು ಬದುಕಿದೆನು ಕಾಣಾ, ಚೆನ್ನಮಲ್ಲಿಕಾರ್ಜುನಾ ॥**

**ಶಿವಶರಣೆಯರ.ವ.ಸಂಪುಟ, ವ.ಸಂಖ್ಯೆ–378**

ವಾಸ್ತವ ಹೀಗಿರುವಾಗ ಮತ್ತು 2016ರ ಪಠ್ಯಪುಸ್ತಕದಲ್ಲಿ ಮತ್ತು 2022ರ ಪಠ್ಯಪುಸ್ತದಲ್ಲಿರುವ ವೀರಶೈವ' ಪದವನ್ನು ತಗೆದು ಹಾಕಿರುವುದು ಸರಿಯಾದ ಕ್ರಮವಲ್ಲ ಮತ್ತು ಇತಿಹಾಸವನ್ನು ತಿರುಚಿದಂತಾಗುತ್ತದೆ. ಇದು ವಿದ್ಯಾರ್ಥಿಗಳಿಗೆ ಮಾಡುವ ಅನ್ಯಾಯ ಮತ್ತು ಕಾನೂನು ಬಾಹಿರ ಕಾರ್ಯವಾಗಿದೆ.

2. **ಈ ವರ್ಷ ಪರಿಷ್ಕೃತಗೊಂಡಿರುವ ಪುಸ್ತಕದಲ್ಲಿ ಬಸವಣ್ಣನವರು 'ಅರಿವನ್ನೇ ಗುರು'ವಾಗಿಸಿಕೊಂಡಿದ್ದರು ಬಸವಣ್ಣನವರು ಇಷ್ಟಲಿಂಗದ ವಿನೂತನ ಪರಿಕಲ್ಪನೆಯನ್ನು ಜಾರಿಗೆ ತಂದರು ಎಂದು ಪ್ರಕಟಿಸಿದ್ದಾರೆ.** ಇದು ಸಂಪೂರ್ಣ ತಪ್ಪು ಮಾಹಿತಿಯಾಗಿದೆ. ಬಸವಣ್ಣನವರು ತಮ್ಮ ವಚನಗಳಲ್ಲಿ ಪ್ರತಿಯೊಬ್ಬರಲ್ಲಿರುವ ಅಂತರಂಗದಲ್ಲಿರುವ ಪರಮಾತ್ಮನ ಅರಿವೇ ಗುರುವಾಗಬೇಕು. ಅರಿವು ಪ್ರತಿಯೊಬ್ಬರ ಬದುಕಿಗೆ ನಿತ್ಯ ದಾರಿದೀಪವಾಗಬೇಕೆಂದು ಪ್ರತಿಪಾಸಿದ್ದಾರೆಯೆ ಹೊರತು ತಮಗೆ ಗುರುವಿಲ್ಲ ತಮಗೆ ತಮ್ಮ ಅರಿವೇ ಗುರು ಎಂದು ಎಲ್ಲಿಯೂ ಯಾವ ಸಂದರ್ಭದಲ್ಲಿಯೂ ಹೇಳಿಲ್ಲ. ಅವರು ಅವರಲ್ಲಿರುವ ಗುರುವಿನ ಬಗೆಗಿನ ಗೌರವವನ್ನು ತಮ್ಮ ಅನೇಕ ವಚನಗಳಲ್ಲಿ ನಿರೂಪಿಸಿದ್ದಾರೆ ಮತ್ತು ತಾವು ಗುರುವಿನಿಂದ ಇಷ್ಟಲಿಂಗವನ್ನು ಪಡೆದಿದ್ದೇನೆ ಎಂದು ಅನೇಕ ವಚನಗಳಲ್ಲಿ ಅವರೇ ಹೇಳಿಕೊಂಡಿದ್ದಾರೆ. ಉದಾಹರಣೆಗಾಗಿ ಕೆಲವೊಂದು ವಚನಗಳು ಹೀಗಿವೆ–

**(1) ಅಂತರಂಗದೊಳಗಿರ್ದ ನಿರವಯಲಿಂಗವನು ಸಾವಯಲಿಂಗವ ಮಾಡಿ,**
**ಶ್ರೀ ಗುರುಸ್ವಾಮಿ ಕರಸ್ಥಲಕ್ಕೆ ತಂದು ಕೊಟ್ಟನಾಗಿ**
**ಆ ಇಷ್ಟಲಿಂಗವೇ ಅಂತರಂಗವನ್ನು ಆವರಿಸಿ**
**ಅಂತರಂಗದ ಕರಣಂಗಳೇ ಕಿರಣಂಗಳಾಗಿ**
**ಬೆಳಗುವ ಚಿದಂಶವೇ ಪ್ರಾಣಲಿಂಗವು, ಆ ಮೂಲಚೈತನ್ಯವೇ ಭಾವಲಿಂಗವು.**
**ಇದನರಿದು, ನೋಡುವ ನೋಟ ಭಾವಪೂರ್ಣವಾಗಿ**
**ತಾನು ತಾನಾದಲ್ಲದೆ, ಇದಿರಿಟ್ಟು ತೋರುವುದಿಲ್ಲವಾಗಿ**
**ಅಖಂಡ ಪರಿಪೂರ್ಣವಪ್ಪ ನಿಜವು ತಾನೆ, ಕೂಡಲಸಂಗಮದೇವ. –ಬ.ವ.ಸಂಖ್ಯೆ 971.**



CamScanner

(2)ವೇದ ವೇದಾಂತಗಳಿಗೆ ಅಸಾಧ್ಯವಾದ
ಅನುಪಮಲಿಂಗವ ತಂದುಕೊಟ್ಟನಯ್ಯಾ, ಸದ್ಗುರು ಎನ್ನ ಕರಸ್ಥಲಕ್ಕೆ.
ನಾದಬಿಂದು ಕಳೆಗೆ ಅಭೇದ್ಯವಾದ
ಅಚಲಿತ ಲಿಂಗವ ತಂದುಕೊಟ್ಟನಯ್ಯಾ, ಸದ್ಗುರು ಎನ್ನ ಕರಸ್ಥಲಕ್ಕೆ.
ವಾಙ್ಮನಕ್ಕಗೋಚರವಾದ
ಅಖಂಡಿತ ಲಿಂಗವ ತಂದುಕೊಟ್ಟನಯ್ಯಾ, ಸದ್ಗುರು ಎನ್ನ ಕರಸ್ಥಲಕ್ಕೆ.
ಇನ್ನು ನಾನು ಬದುಕಿದೆನು, ನಾ ಬಯಸುವ ಬಯಕೆ ಕೈಸಾರಿತ್ತಿಂದು
ಕೂಡಲಸಂಗಮದೇವಾ. – ಬ.ವ.ಸಂಖ್ಯೆ. 1364

(3)ಮಡಕೆಯ ಮಾಡುವಡೆ ಮಣ್ಣೆ ಮೊದಲು
ತೊಡಗೆಯ ಮಾಡುವಡೆ ಹೊನ್ನೆ ಮೊದಲು
ಶಿವಪಥನರಿವಡೆ ಗುರುಪಥವೇ ಮೊದಲು
ಕೂಡಲಸಂಗಮದೇವರನರಿವಡೆ
ಶರಣರ ಸಂಗವೇ ಮೊದಲು, – ಬ.ವ.ಸಂಖ್ಯೆ –70

(4) ಶ್ರೀಗುರು ಕರುಣಿಸಿ ಹಸ್ತಮಸ್ತಕಸಂಯೋಗದಿಂದ
ಪ್ರಾಣಲಿಂಗವನ್ನು ಕರತಲಾಮಳಕವಾಘಿ ಕರಸ್ಥಲಕ್ಕೆ ತಂದುಕೊಟ್ಟನಾಗಿ
ಒಳಗೆನ್ನದೆ ಹೊಗೆನ್ನದೆ, ಆ ಲಿಂಗದಲ್ಲಿ ನಚ್ಚಿ ಮಚ್ಚಿ ಹರುಷದೊಳೋಲಾಡಿದೆ
ಅದೆಂತೆಂದೊಡೆ
ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ ।
ನಾದಬಿಂದುಬಿಂದು ಕಲಾತೀತಂ ಗುರುಣಾ ಲಿಂಗಮುದ್ಭವಂ ॥
ಎಂಬುದಾಗಿ
ಆ ಲಿಂಗವ ಪಡೆದು ಆನಂದಿಸುವೆ, ಕೂಡಲಸಂಗಮದೇವಾ. – ಬ.ವ.ಸಂಖ್ಯೆ –1366

ಇಲ್ಲಿ ಬಸವಣ್ಣನವರ ಕೆಲವು ವಚನಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಈ ರೀತಿ ಗುರುವಿನ ಬಗ್ಗೆ ಮತ್ತು ಗುರುಗಳಿಂದ ಇಷ್ಟಲಿಂಗ ಪಡೆದ ಬಗ್ಗೆ ಉಲ್ಲೇಖಿವಿರುವ ವಚನಗಳು ಹೇರಳವಾಗಿವೆ.

ಬಸವಣ್ಣನವರಿಗಿಂತಲೂ ಪೂರ್ವದಲ್ಲಿಯೇ ಇಷ್ಟಲಿಂಗ ಪೂಜಾ ಪದ್ಧತಿಯಿತ್ತು ಅನ್ನುವುದಕ್ಕೆ ಅನೇಕ ಆಧಾರಗಳಿವೆ. ಇಲ್ಲಿ ಕೆಲವೊಂದನ್ನು ಮಾತ್ರ ಗಮನಸಿಬಹುದಾಗಿದೆ.

(ಅ) ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರ:
ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನ:
ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮತ್
ಇದಂ ತವ ಪ್ರಸರ್ಪಣಂ ಸುಬಂಧುವೇ ಹೀ ನಿರೀಹಿ
–ಋಗ್ವೇದ – 10–60–12,7

ವೇದಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷು ಚ ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಿಯಾತ್ ॥ ಶ್ರೀ ಸಿದ್ಧಾಂತ ಶಿಖಾಮಣಿ, 6–58

ಸಂದರ್ಭೋಚಿತವಾಗಿ ಉಲ್ಲೇಖಿಸಿರುವ ಋಗ್ವೆದದಲ್ಲಿ ಮತ್ತು ಶ್ರೀ ಸಿದ್ಧಾಂತ ಶಿಖಾಮಣಿಗಳಲ್ಲಿ ಇಷ್ಟಲಿಂಗದ ವಿಚಾರವನ್ನು ಹೇರಳವಾಗಿ ನಿರೂಪಿಸಲಾಗಿದೆ. ಋಗ್ವದವು ಲಿಂಗರೂಪಿಯಾದ ಭಗವಂತನು ನನ್ನ ಹಸ್ತದಲ್ಲಿ ವಿರಾಜಮಾನನಾಗಿದ್ದಾನೆ. ಈ ಇಷ್ಟಲಿಂಗರೂಪಿ ಭಗವಂತನು ನನ್ನೆಲ್ಲಾ ರೋಗ ಕಳೆಯು ವೈದ್ಯನಾಗಿದ್ದಾನೆ. ಸಕಲ ಕಲ್ಯಾಣವನ್ನುಂಟು ಮಾಡುವವನಾಗಿದ್ದಾನೆ. ತಾಯಿಯೂ ಆಗಿದ್ದಾನೆ ತಂದೆಯೂ ಆಗಿದ್ದಾನೆ ಎಂದು ಹೇಳಿದರೆ,



CamScanner

ವೀರಶೈವರಿಗೆ ಲಿಂಗಧಾರಣೆಯು ನಿಶ್ಚಿತವಾದ ಸಂಸ್ಕಾರವೆಂದು ವೇದ ಶಾಸ್ತ್ರ ಪುರಾಣ, ಆಗಮ ಮುಂತಾದವುಗಳಲ್ಲಿ ಹೇಳಲಾಗಿದೆ ಎಂದು ಹೇಳಿ ಈ ಇಷ್ಟಲಿಂಗ ಪೂಜೆಯ ಪ್ರಾಚೀನತೆಯನ್ನು ಆಧಾರವಾಗಿ ನಿರೂಪಿಸಿದೆ.

(ಬ)ಲಿಂಗದೀಕ್ಷೆಯ ವಿಚಾರ. ಲಿಂಗದೀಕ್ಷೆ ಸಂಸ್ಕಾರ ವೀರಶೈವ ಲಿಂಗಾಯತ ಧರ್ಮದಲ್ಲಿ ಅವಿಭಾಜ್ಯ ಅಂಗ ಮತ್ತು ಲಿಂಗಪೂಜೆ ಈ ಧರ್ಮದ ನಿತ್ಯ ಆಚಾರ. 'ಇಂದಿನ ಲಿಂಗಾಯತರು ತಮ್ಮ ಎದೆಯ ಮೇಲೆ ಧರಿಸುವ ಇಷ್ಟಲಿಂಗಗಳು ಹರಪ್ಪಾ ಮೋಹೆಂಜೋದಾರೋ ಸಂಸ್ಕೃತಿಯಲ್ಲಿ ದೊರಕಿವೆ' ಎಂದು ಭಾರತದ ಪ್ರಾಚ್ಯಶಾಸ್ತ್ರ ಇಲಾಖೆಯ ಮಹಾನಿರ್ದೇಶಕರಾಗಿದ್ದ ಸರ್ ಜಾನ್ ಮಾರ್ಷಲ್‌ರವರು ತಮ್ಮ 'Mohenjo Daro And Indus Civilization,' ಗ್ರಂಥದ ಪುಟ ಸಂಖ್ಯೆ 49ರಲ್ಲಿ ದಾಖಲಿಸಿದ್ದಾರೆ. ಬಸವಣ್ಣನವರಿಗಿಂತಲೂ ಪೂರ್ವದಲ್ಲಿದ್ದ ಜೇಡರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ ಮುಂತಾದ ಶಿವಶರಣರು ಲಿಂಗ, ಲಿಂಗಪೂಜೆ ಮತ್ತು ಲಿಂಗದೀಕ್ಷೆಯ ಕುರಿತು ತಮ್ಮ ವಚನಗಳಲ್ಲಿ ಉಲ್ಲೇಖ ಮಾಡಿದ್ದಾರೆ.

(ಕ) **ಮಹಾಶಿವಶರಣೆ ಅಕ್ಕ ಮಹಾದೇವಿಯವರು, ಅಲ್ಲಮ ಪ್ರಭುಗಳು ಇನ್ನೂ ಅನೇಕ ಶರಣರಿಗೆ ಬಸವಣ್ಣನವರು ಬೇಟಿಯಾಗುವುದಕ್ಕಿಂತ ಮೊದಲೇ ಅವರವರ ಗುರುಳಿಂದ ಇಷ್ಟಲಿಂಗ ದೀಕ್ಷೆಯನ್ನು ಪಡೆದು ನಿತ್ಯದಲ್ಲಿ ಇಷ್ಟಲಿಂಗೋಪಾಸನೆಯನ್ನು ಮಾಡುತ್ತಿದ್ದರು ಎನ್ನುವ ಸಂಗತಿಯನ್ನು ಯಾರೂ ಅಲ್ಲಗಳೆಯುವಂತಿಲ್ಲ.**

ಕೆಲವು ಜನರು ಬಸವಾದಿ ಶಿವಶರಣರ ಸಂಪೂರ್ಣ ವಚನ ಸಾಹಿತ್ಯವನ್ನು ಸರಿಯಾಗಿ ಅಧ್ಯಯನ ಮಾಡದೆ ಮತ್ತು ಪೂರ್ವಾಗ್ರಹ ಪೀಡಿತರಾಗಿ ತಾವು ಅಂದುಕೊಂಡ ಅಭಿಪ್ರಾಯವೇ ಬಸವಾದಿ ಶರಣರ ಅಭಿಪ್ರಾಯ ಎಂದು ಬಿಂಬಿಸಲಿಕ್ಕೇ ಅವರು ಕೊಡುವ ಕಾರಣ ಹಾಸ್ಯಾಸ್ಪದ. ಇವರು ಹೇಳುವದೇನೆಂದರೆ **'ಶಿವಶರಣರ ವಚನಗಳಲ್ಲಿ 'ವೀರಶೈವ' ಪದಪ್ರಯೋಗವಿರುವ ಮತ್ತು ವೇದೋಪನಿಷತ್ತು ಆಗಮಗಳ ಉಲ್ಲೇಖವಿರುವ ವಚನಗಳು ಪ್ರಕ್ಷಿಪ್ತ ವಚನಗಳು ಇವುಗಳನ್ನು ವೀರಶೈವವಾದಿಗಳು ಸೇರಿಸಿದ್ದಾರೆ' ಎಂದು. ಈ ವಾದಕ್ಕೆ ಹುರುಳಿಲ್ಲ ಯಾಕೆಂದರೆ ಸೇರಿಸಿದ್ದಾರೆ ಎನ್ನುವುದಾದರೆ 'ವೀರಶೈವ' ಪದ ಹಾಗೂ ವೇದೋಪನಿಷತ್ತು ಆಗಮಗಳ ಉಲ್ಲೇಖವಿಲ್ಲದಿರುವ ಮೂಲ ವಚನಗಳೆಲ್ಲಿವೆ ? ಇವರು ನೋಡಿದ್ದಾರಾ ? ಇದು ನಿಜವಾಗಿದ್ದರೆ ಡಾ. ಎಂ.ಎಂ. ಕಲಬುರ್ಗಿಯವರಂತಹ ಸಂಶೋಧಕರು ಸಂಪಾದಿಸಿದ ವಚನ ಸಂಪುಟಗಳಲ್ಲಿ ಇಂತಹ ವಚನಗಳನ್ನೇಕೆ ಪ್ರಕಟಿಸಿರುತ್ತಾರೆ ? ವೀರಶೈವವಾದಿಗಳು ಸೇರಿಸಿದ್ದಾರೆ ಎನ್ನುವುದಾದರೆ ಸೇರಿಸುವ ಸಾಮರ್ಥ್ಯವಿರುವವರಿಗೆ ತಗೆದು ಹಾಕುವ ಸಾಮರ್ಥ್ಯವೂ ಇರುವುದರಿಂದ ಬೇಡವಾದ ವಚನಗಳನ್ನು ತಗೆದುಬಿಡುತ್ತಿದ್ದರು.**

ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಾದ ತಾವು ಕರ್ನಾಟಕ ಶಿಕ್ಷಣ ಇಲಾಖೆಯ 2024ರ ಪ್ರೌಢಶಾಲಾ ಪಠ್ಯಪುಸ್ತಕ ಪರಿಷ್ಕರಣ ಸಮಿತಿಗೆ **ಈ ರೀತಿ ಅವೈಜ್ಞಾನಿಕ ಮತ್ತು ಇತಿಹಾಸಕ್ಕೆ ಮತ್ತು ಸಾವಿರಾರು ವರುಷಗಳಿಂದ ನಡೆದುಕೊಂಡು ಬರುತ್ತಿರುವ ಒಂದು ಪರಂಪರೆಗೆ ಧಕ್ಕೆಯಾಗುವ ವಿಚಾರಗಳನ್ನು ನಿಜಜ್ಞಾನಪಿಪಾಸುಗಳಾದ ವಿದ್ಯಾರ್ಥಿಗಳ ತಲೆಯಲ್ಲಿ ತುಂಬದೇ ನೈಜ ವಿಚಾರಗಳನ್ನು ನೀಡುವ ಕೆಲಸ ಮಾಡಬೇಕೆಂದು ನಿರ್ದೇಶನ ನೀಡಬೇಕೆಂದು ಕೋರುತ್ತೇವೆ.** ಒಂದು ವೇಳೆ 9ನೇ ತರಗತಿಯ ಪಠ್ಯದಲ್ಲಿ ಆದ ದೋಷಗಳನ್ನು ಸರಿಪಡಿಸದಿದ್ದರೆ ನಾವು ಕಾನೂನಿನ ಮೊರೆ ಹೋಗಬೇಕಾಗುತ್ತದೆಂದು ತಮ್ಮಲ್ಲಿ ಸವಿನಯದಿಂದ ತಿಳಿಯಪಡಿಸುತ್ತೇವೆ.

**ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆ ಪರವಾಗಿ**

**ಡಾ॥ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು**
**ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠ ಬೆಂಗಳೂರು–37.**



CamScanner